ನಗರಗಳಲ್ಲಿ ಮಾತ್ರವಲ್ಲ ಮೈಲಿಗಟ್ಟಲೆ ದೂರದ ಊರುಗಳ ಹೆದ್ದಾರಿಗಳಲ್ಲೂ ಕಾಣಬಹುದು. ಉದ್ದಕ್ಕೂ ಸಾಲಾಗಿ ತೂಗುವ, ಹೂಗಳಿಂದ ತುಂಬಿದ ಗಿಡ, ಬಳ್ಳಿಗಳಿವೆ. ಇವುಗಳಿಗೆ ಕಾಲಕಾಲಕ್ಕೆ ನೀರುಣಿಸಬೇಕು, ಗೊಬ್ಬರ ಹಾಕಬೇಕು, ಕಟ್(ಟ್ರಿಮ್) ಮಾಡಬೇಕು. ಇಷ್ಟೆಲ್ಲವನ್ನೂ ಸತತವಾಗಿ ಮಾಡುತ್ತಿರುವುದು ಮಹದಚ್ಚರಿ. ಈ ಎಲ್ಲ ಕೆಲಸಗಳಿಗೂ ಆಧುನಿಕ ಯಂತ್ರಗಳನ್ನು ಬಳಸುತ್ತಾರೆ. ಲೇಖಕನಿಗೆ ಇದು ತಿಳಿದ ವಿಚಾರವೆ. ಆದರೆ ಅವನು ಹೆಚ್ಚು ಒತ್ತು ಕೊಡುವುದು, ಮಾನ್ಯಮಾಡುವುದು ಇಲ್ಲಿನ ಜನರ ಸೌಂದರ್ಯಪ್ರಜ್ಞೆ ಹಾಗೂ ಕಲಾಭಿರುಚಿಗಳನ್ನು ಹಾಗೂ ಪ್ರಕೃತಿಯ ಜೊತೆಗೆ ಕೈಜೋಡಿಸುವ ಮನೋಧರ್ಮವನ್ನು.

ಭಾರತದೊಂದಿಗೆ ಹೋಲಿಸಿದಾಗ ಎದ್ದು ಕಾಣುವ ಇನ್ನೊಂದು ವ್ಯತ್ಯಾಸ, ಶಿಸ್ತನ್ನು ಸರ್ವತ್ರ ಗೌರವಿಸುವುದು. ಚಾಚೂ ತಪ್ಪದೆ ಸಾರ್ವಜನಿಕ ನಿಯಮಗಳನ್ನು ಪಾಲಿಸುವುದು ಚೀನೀಯರಲ್ಲಿ ಸಾಮಾನ್ಯವಾಗಿರುವುದು. ಕ್ಯೂನಲ್ಲೂ ಶಿಸ್ತಿನಿಂದ, ತಾಳ್ಮೆಯಿಂದ ನಿಂತಿರುತ್ತಾರೆ. ಒಬ್ಬರನ್ನೊಬ್ಬರು ತಳ್ಳುವುದಾಗಲಿ, ನೂಕುವುದಾಗಲಿ, ನೂಕುನುಗ್ಗಲನ್ನಾಗಲಿ ಈ ಲೇಖಕ ಎಲ್ಲಿಯೂ ನೋಡಲಿಲ್ಲ. ವಾಹನಗಳ ಸಂಚಾರ ಸಹ ಈ ಶಿಸ್ತನ್ನು ಅನುಸರಿಸುತ್ತದೆ. ಸರ್ಕಾರಿ ಕಚೇರಿಗಳಲ್ಲೂ ಖಾಸಗಿ ಸಂಸ್ಥೆಗಳ ಕಾರ್ಯಾಲಯಗಳಲ್ಲೂ ಸೌಜನ್ಯದ ಹಾಗೂ ದಕ್ಷ ಸೇವೆ ದೊರೆಯುತ್ತದೆ.

**ಅಚ್ಚರಿಯ ವಿಷಯಗಳು:**

೧. ಜಗತ್ತಿನ ೨೦ ಅತ್ಯಂತ ಉದ್ದವಾದ ಸೇತುವೆಗಳಲ್ಲಿ ೧೪ ಚೀನಾದಲ್ಲಿವೆ. ಇದರಲ್ಲಿ ಜಗತ್ತಿನ ಅತಿದೀರ್ಘವಾದ ಸೇತುವೆ – ೧೬೪ ಕಿ.ಮೀ. ಉದ್ದವಿರುವ ದಾನ್ಯಾಂಗ್ ಕುನ್‌ಷನ್ ಸೇತುವೆಯೂ ಸೇರಿದೆ. (ಹೋಲಿಸಿ: ಭಾರತದ ಅತಿ ಉದ್ದವಾದ ಸೇತುವೆ– ೯.೯ ಕಿ.ಮೀ; ಬೆಂಗಳೂರು ಎಲಿವೇಟೆಡ್ ಟೋಲ್ ವೇ.)

೨. ೨೦೦೮ರಲ್ಲಿ ನಿರ್ಮಾಣಕಾರ್ಯ ಪೂರ್ಣವಾದ ಯಿಚಾಂಗ್‌ನ ಮೂರು ಅಂತಸ್ತಿನ ಅಣೆಕಟ್ಟು ಜಗತ್ತಿನಲ್ಲೇ ಬಹು ದೊಡ್ಡ ವಿದ್ಯುತ್ ಉತ್ಪಾದಕ ಕೇಂದ್ರವಾಗಿದೆ (೨೨ GW ನಷ್ಟು ವಿದ್ಯುಚ್ಛಕ್ತಿಯನ್ನು ಇದು ಉತ್ಪಾದಿಸುತ್ತದೆ.)

೩. ಮೂರು ಅಂತಸ್ತಿನ ಅಣೆಕಟ್ಟಿನ ಜಲಾಶಯವನ್ನು ದಾಟಲು ನಿರ್ಮಿತವಾದ, ತೇಲುವ ಹಡಗನ್ನು ಎತ್ತುವ, ಜಗತ್ತಿನಲ್ಲೇ ಅತಿ ದೊಡ್ಡದಾದ ಲಿಫ್ಟ್‌ನ ನಿರ್ಮಾಣ ಕಾರ್ಯ ಮುಕ್ತಾಯದ ಹಂತದಲ್ಲಿದೆ.

೪. ಮಹಾವೇಗದ ರೈಲು ಎಂಜಿನ್, ಗಾಡಿಗಳನ್ನು ತಯಾರು ಮಾಡುವ ಕಾಂಟ್ರಾಕ್ಟ್‌ಗಳನ್ನು ಹೊರದೇಶಗಳಿಂದ ಚೀನಾ ಪಡೆದಿದೆ.

೫. ಚೀನಾ, ರಷ್ಯಾ, ಕೆನಡಾ ಮತ್ತು ಅಮೆರಿಕಾಗಳನ್ನು ಸೇರಿಸುವ, ಅತ್ಯಂತ ವೇಗವಾಗಿ ಓಡಬಲ್ಲ ಬುಲೆಟ್ ಟ್ರೇನನ್ನು ತಯಾರು ಮಾಡುವ ಪ್ರಸ್ತಾಪವಿದೆ ಎಂದು ಅಧಿಕೃತ ಚೀನೀ ಮಾಧ್ಯಮಗಳು ಪ್ರಕಟಿಸಿವೆ.

೬. ಗಂಟೆಗೆ ೬ ಸಾವಿರ ಕಿ.ಮೀ. ವೇಗದಲ್ಲಿ ಓಡಬಲ್ಲ ಟ್ರೇನನ್ನು ತಯಾರಿಸುವ ಯೋಜನೆಯಲ್ಲಿದೆ ಚೀನಾ. (ಇನ್ನು ಕನಿಷ್ಠ ಮೂರು – ಗರಿಷ್ಠ ಆರು ವರ್ಷಗಳಲ್ಲಿ ಗಂಟೆಗೆ ಒಂದು ಸಾವಿರ ಕಿ.ಮೀ. ವೇಗದಲ್ಲಿ ಓಡಬಲ್ಲ ಟ್ರೇನ್ ಸಿದ್ಧವಾಗಿ ಬರುತ್ತದೆ.)

೭. ರೈಲು ನಿಲ್ದಾಣದಲ್ಲಿ ಟ್ರೇನು ನಿಲ್ಲುವ ಬದಲು, ನಿಲ್ದಾಣದ ಒಂದು ಭಾಗವೇ ವೇಗವಾಗಿ ಚಲಿಸಿ, ಪ್ರಯಾಣಿಕರನ್ನು ಚಲಿಸುತ್ತಿರುವ ಟ್ರೇನ್ ಕಂಪಾರ್ಟ್‌ಮೆಂಟಿಗೆ ಸಾಗಿಸುವ ವ್ಯವಸ್ಥೆ ಮಾಡುತ್ತಿದ್ದಾರೆ.

೮. ಪನಾಮಾ ಕಾಲುವೆಗೆ ಬದಲಾಗಿ ಭಾರೀ ವ್ಯವಸ್ಥೆಯನ್ನು ನೆರೆ ದೇಶವಾದ ನಿಕರಾಗುವಾದಲ್ಲಿ ೨೦೧೫ರ ವೇಳೆಗೆ ಕಟ್ಟಿ ಮುಗಿಸುವುದಾಗಿ ಒಂದು ಚೀನೀ ಕಂಪನಿ ಪ್ರಕಟಿಸಿದೆ.

೯. ಕಾರು ಮತ್ತಿತರ ವಾಹನಗಳನ್ನು ಸಾಗಿಸುವ ಭಾರೀಗಾತ್ರದ ಬಸ್ಸುಗಳನ್ನು ತಯಾರು ಮಾಡುವ ಕಾರ್ಯ ಅಲ್ಲಿ ಆರಂಭವಾಗಿದೆ.

ಅತ್ಯಾಧುನಿಕವಾಗಿ ಮುಂದುವರಿದಿರುವ ಚೀನಾದಲ್ಲಿ ಈ ಅದ್ಭುತಗಳು ನಡೆಯುತ್ತಿರುವುದು ಅಚ್ಚರಿಯೇನಲ್ಲ.

ಚೀನಾ ಹೀಗೆ ಅದ್ಭುತವಾದ ಪ್ರಗತಿಯನ್ನು ಸಾಧಿಸಿದೆ, ಅಭಿವೃದ್ಧಿಯ ಪಥದಲ್ಲಿ ದಾಪುಗಾಲಿಡುತ್ತಿದೆ ಎಂಬುದು ಯಾರೂ ತಳ್ಳಿಹಾಕಲಾಗದ ವಾಸ್ತವ. ಆದರಿಂದ ನಾವು ಸ್ಫೂರ್ತಿ ಪಡೆಯಬೇಕು. ಅವರು ಸಾಧಿಸಿದ್ದನ್ನು ನಾವು ಸಾಧಿಸಲಾರೆವೆ? ಏಕೆ ಸಾಧಿಸುತ್ತಿಲ್ಲ? ಎಂದು ನಮ್ಮನ್ನು ನಾವು ಕೇಳಿಕೊಳ್ಳಬೇಕು. ಚೀನೀಯರ ಪ್ರಯೋಗಗಳಿಂದ ನಾವು ಕಲಿಯಬೇಕು. ನಮ್ಮ ಜನರನ್ನು ಗಾಢ ನಿದ್ರೆಯಿಂದ ದೀರ್ಘಕಾಲದ ಜಡತ್ವದಿಂದ ಬಡಿದೆಬ್ಬಿಸಬೇಕು.

ಏನೇ ಆಗಲಿ, ಭಾರತಕ್ಕೆ ಸಾವಿರಾರು ವರ್ಷಗಳ ಭವ್ಯವಾದ ಮತ್ತು ಗಟ್ಟಿಯಾದ ಪರಂಪರೆ ಇದೆ. ಇದೇ ಶ್ರೇಷ್ಠವಾದ ಪೂರ್ವಾರ್ಜಿತ ಆಸ್ತಿ, ಆನುವಂಶಿಕವಾಗಿ ಬಂದಿರುವ ಸಾಮರ್ಥ್ಯ. ಮೀಸಲಿಟ್ಟ ದತ್ತಿಯಾಗಿ ಬಂದಿರುವ ಈ ಶಕ್ತಿಯ ಸಹಜ ಗತಿಯ ಪ್ರಗತಿಯನ್ನು ಯಾರೂ ತಡೆಯಲಾರರು. ಜಡವಾಗಿ ನಿಂತಂತೆ ಕಾಣುವುದು ನಿಜವಾಗಿ ಒಂದು ಭ್ರಮೆ. ಈ ಸುಪ್ತ ಚೇತನ ಭಾರೀ ಅಲೆಯಾಗಿ ಮೇಲೇಳುತ್ತದೆ. ಆಧುನಿಕ ಋಷಿ, ಸ್ವಾಮಿ ವಿವೇಕಾನಂದರು ರಾಮನಾಡಿನಲ್ಲಿ ನುಡಿದ ಭವಿಷ್ಯವಾಣಿ ಅನತಿಕಾಲದಲ್ಲೇ ನಿಜವಾಗುವುದರಲ್ಲಿ ಸಂದೇಹವಿಲ್ಲ:


''ನಮ್ಮೀ ಮಾತೃಭೂಮಿಯು ತನ್ನ ದೀರ್ಘನಿದ್ರೆಯನ್ನು ತ್ಯಜಿಸಿ ಜಾಗೃತವಾಗುತ್ತಿರುವುದನ್ನು ಕುರುಡರು ಮಾತ್ರ ಕಾಣಲಾರರು, ಮೂರ್ಖರು ಮಾತ್ರ ಕಾಣಲೊಲ್ಲರು. ಅವಳನ್ನು ಇನ್ನು ಯಾರೂ ತಡೆಯಲಾರರು. ಆಕೆ ಇನ್ನು ಎಂದೆಂದೂ ನಿದ್ದೆ ಹೋಗುವುದಿಲ್ಲ. ಯಾವ ಬಾಹ್ಯಶಕ್ತಿಯೂ ಇನ್ನು ಅವಳನ್ನು ಹಿಮ್ಮೆಟ್ಟಿಸಲಾರದು. ಏಕೆಂದರೆ ಆ ಮಹಾಕಾಳಿಯು ಪ್ರತಿಷ್ಠಾಪನೆಗೊಳ್ಳುತ್ತಿದ್ದಾಳೆ.''

ನಾವೆಲ್ಲ ಇದಕ್ಕಾಗಿ ಶ್ರಮಿಸಬೇಕು. ಮತ್ತೊಮ್ಮೆ ಸ್ವಾಮಿ ವಿವೇಕಾನಂದರ ಶಕ್ತಿಯುತವೂ ಸ್ಫೂರ್ತಿಯುತವೂ ಆದ ನುಡಿಗಳನ್ನು ಉಲ್ಲೇಖಿಸುತ್ತ ಈ ಪ್ರವಾಸಕಥನಕ್ಕೆ ಸೂಕ್ತವಾದ ಮಂಗಳ ಹಾಡೋಣ:

''ಸಹೋದರರೇ, ಎಲ್ಲರೂ ಕಷ್ಟಪಟ್ಟು ದುಡಿಯೋಣ. ನಿದ್ರೆಗೆ ಸಮಯವಲ್ಲ. ನಮ್ಮ ಇಂದಿನ ಕಾರ್ಯದ ಮೇಲೆ ಭವಿಷ್ಯ ಭಾರತ ನಿಂತಿದೆ. ನಮಗಾಗಿ ಆಕೆ ಕಾಯುತ್ತಿರುವಳು. ಆಕೆ ಕೇವಲ ನಿದ್ರಿಸುತ್ತಿರುವಳು, ಅಷ್ಟೆ. ಜಾಗೃತರಾಗಿ, ಏಳಿ, ಎದ್ದುನೋಡಿ. ಹಿಂದಿಗಿಂತ ಹೆಚ್ಚು ವೈಭವಪೂರ್ಣಳಾಗಿ, ಬಲಿಷ್ಠಳಾಗಿ ನಮ್ಮ ಭಾರತಮಾತೆಯು ಶೋಭಾಯಮಾನವಾಗಿರುವ ತನ್ನ ಸನಾತನ ಸಿಂಹಾಸನದ ಮೇಲೆ ಮಂಡಿಸಿರುವುದನ್ನು ನೋಡಿ.'' ***(ಸಮಾಪ್ತಿ)***

ಪುಸ್ತಕ ಪರಿಚಯ

# ಜೀವದ ಹಾಡು (ಉಪನಿಷತ್ ಕಾವ್ಯ)







ಶೀರ್ಷಿಕೆ : **ಜೀವದ ಹಾಡು (ಉಪನಿಷತ್ಕಾವ್ಯ)**
ಲೇಖಕರು/ಪ್ರಕಾಶಕರು : **ಕೆ. ಅನಂತರಾಮು**
**765, 5ನೆ ಅಡ್ಡರಸ್ತೆ , 2 ನೇ ಬ್ಲಾಕ್, ಬನಶಂಕರಿ 1ನೇ ಹಂತ,**
**ಬೆಂಗಳೂರು 560 050 ಫೋ : 9740153970**
anantharamuk@yahoo.in

ಅಗ್ರಹಾರ ಮೂಲದ, ಬೆಂಗಳೂರಿನಲ್ಲಿ ನೆಲೆಸಿರುವ ಶ್ರೀ ಕೆ. ಅನಂತರಾಮು ಅವರು ಈಚೆಗೆ ಐದು ಕಥಾಸಂಕಲನ, ಕಾದಂಬರಿ ಮೊದಲಾದ ಪುರಾಣ-ಇತಿಹಾಸಗಳ ವಸ್ತುಗಳನ್ನು ಹೊಂದಿದ ಗದ್ಯಕೃತಿಗಳನ್ನು ಪ್ರಕಟಿಸಿದ್ದಾರೆ. ಹೀಗೆ ಗದ್ಯದಿಂದ ಆರಂಭಿಸಿ, ತಮ್ಮ ಆರನೆಯ ಕೃತಿ 'ಜೀವದ ಹಾಡ'ನ್ನು ಛಂದೋಬದ್ಧವಾದ ಪದ್ಯದಲ್ಲಿ ರಚಿಸಿದ್ದಾರೆ. ಇದು ಈ ವರ್ಷ ಬಿಡುಗಡೆಯಾಗಿದೆ. ಈಶಾವಾಸ್ಯ, ಕೇನ, ಮಾಂಡೂಕ್ಯ ಹಾಗೂ ತೈತ್ತಿರೀಯ ಉಪನಿಷತ್ತುಗಳ ಭಾವ ವಿಸ್ತರಣಾನುವಾದ ಈ ಕೃತಿ. ಜತೆಗೆ, ಶೃಂಗೇರಿ ಶಕ್ತಿಧರ ಶರ್ಮ ಅವರಿಂದ ಉಪನಿಷತ್ತುಗಳ ಪಠನವನ್ನೂ, ಹೊಸಹಳ್ಳಿ ಅನಂತನಾರಾಯಣ ಅವರಿಂದ ಕನ್ನಡ ಕಾವ್ಯಭಾಗದ ವಾಚನವನ್ನು ಮಾಡಿಸಿ, ತಾವೇ ವ್ಯಾಖ್ಯಾನ ಮಾಡಿ, ಅದರ **ಡಿವಿಡಿ**ಯನ್ನೂ ಹೊರತಂದಿದ್ದಾರೆ. ಅವರ ಉತ್ಸಾಹವನ್ನು ಮೆಚ್ಚಬೇಕಾದದ್ದೆ.

ಶ್ರೀ ಅನಂತರಾಮು ವಿಜ್ಞಾನ ಪದವೀಧರರು, ಲೌಕಿಕವಾಗಿ ವ್ಯಾಪಾರಿ ಸಂಸ್ಥೆಯ ಉದ್ಯೋಗಿ, ಭಾವುಕರು. ಅವರ ವ್ಯಕ್ತಿತ್ವ ರೂಪುಗೊಂಡಿರುವುದು ವೇದಜ್ಞರಾದವರ ವಂಶದಲ್ಲಿ ಬೆಳೆದು ಬಂದದ್ದರಿಂದ. ಉಪನಿಷತ್ತುಗಳ ಅರ್ಥಾನುಸಂಧಾನ ಅವರಿಗೆ ಪರಂಪರೆಯಿಂದ ಬಂದ ಶಕ್ತಿಯಾಗಿದ್ದರೆ, ಹಳಗನ್ನಡ ಭಾಷಾಸಿದ್ಧಿ ಸ್ವಪ್ರಯತ್ನದಿಂದ ರೂಢಿಸಿಕೊಂಡದ್ದು. ವಿವಿಧ ಛಂದೋರೂಪಗಳ ನಿರ್ವಹಣೆ ಅವರ ಪ್ರತಿಭೆಯ ಸೂಚಕ. ಸ್ವಂತದ ಪೀಠಿಕಾ ಪದ್ಯಗಳು ಸಹಜವಾಗಿ ಅವರ ಅನಿಸಿಕೆಯನ್ನು ಅಭಿವ್ಯಕ್ತಗೊಳಿಸಿ, ತೃಪ್ತಿಕೊಟ್ಟಿದೆ.

ವೇದಾಂತವಾದ ಉಪನಿಷತ್ತುಗಳು ಬಾಯಿಂದ ಬಾಯಿಗೆ ಹರಿದು ಬಂದವಾದ್ದರಿಂದ, ಅಲ್ಲಿನ ವಿಚಾರಗಳು ಸಂಕ್ಷಿಪ್ತರೂಪದಲ್ಲಿ ಇವೆ. ಹೀಗಾಗಿ, ಆಚಾರ್ಯರುಗಳಿಗೆ ಅವುಗಳ ಮೇಲೆ ಭಾಷ್ಯ ಬರೆಯಬೇಕಾಯಿತು. ಪರಿಭಾವನೆಯನ್ನು ಅನುಸರಿಸಿ ಅರ್ಥದ ವಿಸ್ತಾರ, ವ್ಯಾಖ್ಯಾನ. ವಿವಿಧ ಆಯಾಮಗಳಲ್ಲಿ ವಿವಿಧ ಪರಿಭಾಷೆಗಳಲ್ಲಿ ನಿರೂಪಣೆ ಸಾಧ್ಯವಾಗಬಲ್ಲ ಮಂತ್ರಗಳು ಹಲವು. ಹೀಗಾದಾಗ, ಮೂಲ ವಿಚಾರ ಬೀಜರೂಪಿ; ವ್ಯಾಖ್ಯಾನ ವೃಕ್ಷದ ಹಲವು ಕೊಂಬೆಗಳಲ್ಲಿ ಅದರ ಅರ್ಥ ವಿಸ್ತಾರಗೊಂಡು, ಜೀವ ಪಡೆದುಕೊಳ್ಳುತ್ತದೆ. ಈ ಚೈತನ್ಯ ಸಹೃದಯರಿಗೆ ತಲುಪಲು ಕಾವ್ಯಶರೀರವು ಸಂಗೀತದ ಸಹಾಯ ಪಡೆದು, ತಲ್ಲೀನಗೊಳಿಸುವಲ್ಲಿ ಶಕ್ತವಾಗುತ್ತದೆ. 'ಜೀವದ ಹಾಡು' ಈ ದೃಷ್ಟಿಯಿಂದ ಸ್ವಾಗತಾರ್ಹ ಪ್ರಯೋಗ. ಉಪನಿಷತ್ತುಗಳು ವಿಷಯವನ್ನು ಸಂಕ್ಷೇಪಿಸಿರುವ ಕಾರಣದಿಂದ ಜನರನ್ನು ಮುಟ್ಟಲಾಗದೆ ಹೋಗಿದೆಯೆಂಬ ಭಾವನೆಯು ಲೇಖಕ ರಲ್ಲಿ ಇದ್ದುದರಿಂದ, ಈ ವಿಸ್ತಾರದ ಪ್ರಯತ್ನ. ಮಾನವ ಜೀವನಕ್ಕೆ ಹತ್ತಿರವಾಗಿರುವ ಈಶಾವಾಸ್ಯ, ಪದಲಾಲಿತ್ಯ, ಗದ್ಯಪದ್ಯಗಳ ಸಂಗಮ ಶೈಲಿ, ಗಂಭೀರ ಸಂಗೀತದ ಗುಣಗಳ ತೈತ್ತಿರೀಯಗಳು ಮೊದಲಿನಿಂದಲೂ ಅವರನ್ನು ಆಕರ್ಷಿಸಿ, ಪ್ರೇರಿಸಿ, ಇಷ್ಟವಾದವು. ಇವುಗಳನ್ನು ಕನ್ನಡಿಸಿದ್ದು ಸಮಾಧಾನ ತಂದರೂ, ಈ ಕೃತಿಯ ಆತ್ಮ ವೆಂದು ಭಾವಿಸುವ ಬ್ರಹ್ಮಾನಂದವಲ್ಲೀ ಮತ್ತು ಭೃಗುವಲ್ಲಿಗಳ ಛಂದಸ್ಸಿನ ಬಗ್ಗೆ ಸ್ವಲ್ಪ ನಿರಾಸೆಯನ್ನು ವ್ಯಕ್ತಪಡಿಸಿದ್ದಾರೆ. ತಮಗೆ ಕಾವ್ಯಾನಂದವನ್ನು ಕೊಟ್ಟಿರುವುದು ಪೀಠಿಕಾ ಪದ್ಯಗಳು ಮಾತ್ರ ಎನ್ನುತ್ತಾರೆ.

ಮೇಲ್ನೋಟದಲ್ಲಿ ವಿಶ್ವದ ತಾರತಮ್ಯಯುಕ್ತ ಸ್ಥಿತಿಯನ್ನು ನಿರಾಕರಿಸಿ, ಆದರ್ಶದ ಕಲ್ಪನೆಯಾದ ಅದ್ವೈತದ ಬಗ್ಗೆ ತಮಗೆ ಒಲವು ಇರುವುದನ್ನೂ, ಆದರೆ ಗಾಂಧಿ, ಬಸವಣ್ಣ, ಮಹಾವೀರರ ಕಾಯಕ ತತ್ತ್ವ, ಅಹಿಂಸಾಮಾರ್ಗ ಈ ಕಾವ್ಯದಲ್ಲಿ ಪ್ರೇರಕವಾಗಿರುವುದನ್ನೂ ತಿಳಿಸಿದ್ದಾರೆ. ಒಂದು ಉದಾಹರಣೆಯನ್ನು ತೆಗೆದುಕೊಂಡು ಇವರ ಕಾವ್ಯಮಾರ್ಗವನ್ನು ವಿವರಿಸಬಹುದು. ಈಶಾವಾಸ್ಯದ ಶಾಂತಿ ಮಂತ್ರ ಇದು: **ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ। ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ॥** ಎರಡು ಸಾಲಿನ ಈ ಮಂತ್ರಕ್ಕೆ ಮೊದಲು ಹೊಸಗನ್ನಡ ಗದ್ಯದಲ್ಲಿ ನೇರವಾದ ಅನುವಾದ ನೀಡಿದ್ದಾರೆ: 'ದೈವವು ಪರಿಪೂರ್ಣವಾದುದು. ಅದರಿಂದ ಹೊರಬಂದು ವ್ಯಕ್ತವಾಗಿರುವ ವಿಶ್ವವೂ ಪೂರ್ಣವಾಗಿದೆ. ಅದಾದನಂತರವೂ ದೈವವು ಪೂರ್ಣವಾಗಿಯೇ ಉಳಿದಿದೆ.' ಅರ್ಥಪ್ರೇರಣೆಯ ಶಕ್ತಿಯುಳ್ಳ ಈ ಮಂತ್ರದ ಭಾವವಿವರಣೆಯನ್ನು ಲೇಖಕರು ಎರಡು ವೃತ್ತ ಹಾಗೂ ಒಂದು ಷಟ್ಪದಿಯಲ್ಲಿ ನೀಡಿದ್ದಾರೆ. ಮಂಜುಭಾಷಿಣೀ ವೃತ್ತದಲ್ಲಿರುವ ಮೊದಲ ಪದ್ಯ ಪೂರ್ಣ ಪರಮಾತ್ಮನು ಆತ್ಮಚೈತನ್ಯದಲ್ಲಿ ವಿಸ್ತಾರಗೊಂಡರೂ ಮೂಲದಲ್ಲಿ ಕುಗ್ಗದೆ ಪೂರ್ಣನಾಗಿ ಉಳಿಯುವನೆಂದು ಗದ್ಯಾನುವಾದಕ್ಕೆ ಸಮೀಪವಾಗಿದೆ. ಎರಡನೆಯ ಪರಿವರ್ಧಿನೀ ಷಟ್ಪದಿಯಲ್ಲಿ ಗಣಿತದ ಪರಿಭಾಷೆಯಲ್ಲಿ ಅಂಕಗಣಿತದ ಅನಂತ ಹಾಗೂ ಜೀವಶಾಸ್ತ್ರದ ಪರಿಭಾಷೆಯಲ್ಲಿ ಡಿಎನ್ಎ ಕಣ ಆನುವಂಶಿಕತೆಯನ್ನು ಮುಂದುವರೆಸುವ ರೀತಿಯ ಪೂರ್ಣತೆಯನ್ನು ತಿಳಿಸುತ್ತಾರೆ. ವಿಚಾರದ ವಿವಿಧ ಆಯಾಮಗಳನ್ನು ಇಲ್ಲಿ ಕಾಣಬಹುದು. ಮೂರನೆಯ ತರಳ ವೃತ್ತದಲ್ಲಿ ಜೀವದ ಮೂಲ